ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue 2, September-October, 2024, Pp. 57-63
©*IIMRD*, Mysuru
IIMRD JOURNALS
www.iimrd.com

# ಡಾ. ಮೊಗಳ್ಳಿ ಗಣೇಶ್ ಅವರ ಆಯ್ದ ಕಥೆಗಳಲ್ಲಿ ಕೌಟುಂಬಿಕ ನೆಲೆಗಳು

**ಡಾ. ಮಾರುತಿ ಬಿ. ಕೆ**
ಅತಿಥಿ ಉಪನ್ಯಾಸಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಪ್ರಥಮ ದರ್ಜೆ ಘಟಕ ಕಾಲೇಜು, ತೂರುವನೂರು.

**ಸಾರಾಂಶ: (Abstract)**

*ಮೊಗಳ್ಳಿ ಗಣೇಶ್ ಅವರು ಚನ್ನಪಟ್ಟಣ ತಾಲೂಕಿನ ಸಂತೆಮೊಗೇನಹಳ್ಳಿ ಗ್ರಾಮದಲ್ಲಿ ಜನಿಸಿದರು. ಗ್ರಾಮೀಣ ಪರಿಸರದಲ್ಲಿ ತಮ್ಮ ಬಾಲ್ಯದ ದಿನಗಳನ್ನು ಕಳೆದ ಮೊಗಳ್ಳಿ ಅವರು ತಮ್ಮ ಅನುಭವವನ್ನು ವಿಶಿಷ್ಟ ವಿನ್ಯಾಸದಲ್ಲಿ ಸೊಗಸಾದ ಕಥೆಗಳನ್ನಾಗಿ ಕಟ್ಟಿಕೊಟ್ಟಿದ್ದಾರೆ. ಮೊಗಳ್ಳಿ ಅವರು ಬುಗುರಿ, ಮಣ್ಣು, ಅತ್ತೆ, ಭೂಮಿ, ಕನ್ನೆಮಳೆ ಕಥಾ ಸಂಕಲನಗಳನ್ನು ಹೊರತಂದಿದ್ದಾರೆ. ಪ್ರಸ್ತುತ ಲೇಖನದಲ್ಲಿ ಮೊಗಳ್ಳಿ ಗಣೇಶ್ ಅವರ ಆಯ್ದ ಕಥೆಗಳಲ್ಲಿ ಕೌಟುಂಬಿಕ ನೆಲೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.*

**ಮುಖ್ಯಪದಗಳು (Keywords):** ಕನ್ನಡ ಸಾಹಿತ್ಯ, ಮೊಗಳ್ಳಿ ಗಣೇಶ್, ಕಥಾ ಸಂಕಲನ, ವ್ಯೂಹ, ಬೇಟೆ, ಕಿಚ್ಚು, ಕಾಳಿ, ಬಾಡೂಟ, ತಣಿಗೆ.

**ಪೀಠಿಕೆ**

ದಲಿತ ಸಮಾಜದ ಹಸಿವನ್ನು ನೀಗಿಸುವ ವಸ್ತು, ವಿಷಯಗಳನ್ನು ಮೊಗಳ್ಳಿ ಗಣೇಶ್ ಅವರ ಕಥೆಗಳಲ್ಲಿ ನೋಡಬಹುದು. ದಲಿತರ ಹಸಿವು ಕೇವಲ ದಲಿತರ ಹಸಿವು ಅಲ್ಲ, ಇದು ಎಷ್ಟೋ ಶೋಷಿತ ಸಮುದಾಯದ ಹಸಿವೆಂದು ಪರಿಭಾವಿಸುವುದು ಬಹಳ ಮುಖ್ಯವಾದ ಅಂಶವಾಗಿದೆ. ಮೊಗಳ್ಳಿ ಅವರ 'ಬತ್ತ' ಕಥೆಯಲ್ಲಿ ಶೋಷಿತವರ್ಗ ಹಲವು ವರ್ಷಗಳಲ್ಲಿ ಕಾಣದಿದ್ದ 'ಬತ್ತ'ವನ್ನು ಕಾಣುವ, ಅದರಿಂದ ಹಸಿವನ್ನು ನೀಗಿಸಿಕೊಳ್ಳುವ ವಾತಾವರಣ ಗಮನಾರ್ಹವಾದದ್ದು. ದಲಿತಕೇರಿಯಲ್ಲಿ ತಮ್ಮ ಬಹುದಿನದ ಬಯಕೆಯನ್ನು ಈಡೇರಿಸಿಕೊಳ್ಳುವಂತಹ ಆಶಾದಾಯಕ ಹಬ್ಬವನ್ನು ಆಚರಿಸುತ್ತೇವೆ ಎಂಬ ಮನೋಭಾವನೆ ದಲಿತರಲ್ಲಿ ಕಂಡುಬರುತ್ತದೆ. 'ಬತ್ತ' ಕಥೆಯಲ್ಲಿ ಹೊಲೆಯರು ಬತ್ತವನ್ನು ಕೊಯ್ಯುವುದು, ಅದನ್ನು ಒಗ್ಗೂಡಿಸಿ ಇದರಲ್ಲಿ ಸ್ವಲ್ಪವನ್ನು ತಮ್ಮದಾಗಿಸಿಕೊಳ್ಳಲು ಬಿಡದ ಮೇಲ್ಜಾತಿಯ ವರ್ಗ, ಅಧಿಕಾರಿಶಾಹಿಯ ಅಮಾನವೀಯ ಅಂಶಗಳನ್ನು ಕಥೆಗಾರರು ಮುಖಾಮುಖಿಗೊಳಿಸಿದ್ದಾರೆ. ದಲಿತರು ಬೆಳಗಾಗುವುದನ್ನೇ ಕಾಯುತ್ತಿದ್ದು ತಮ್ಮ ಹಸಿದ ಒಡಲಿಗೆ ಅನ್ನವನ್ನು ಕಾಣಲು ಹಾತೊರೆಯುತ್ತಾರೆ. 'ಬತ್ತ'ವನ್ನು ತಮ್ಮ ಕುಡುಗೋಲು ತೆಗೆದುಕೊಂಡು ಒಂದೆಡೆ ರಾಶಿಹಾಕಿ ಇನ್ನೇನೂ ಬತ್ತವೆಂಬ ಮಾಯಾಂಗನೆ ಮನೆ ಸೇರುತ್ತಾಳೆ ಎನ್ನುವಷ್ಟರಲ್ಲಿ ಗದ್ದೆಯ ಮಾಲೀಕ, ಜಿಲ್ಲಾಧಿಕಾರಿ, ಇನ್ಸ್‌ಪೆಕ್ಟರ್‌ಗಳ ಆಗಮನದಿಂದಾಗಿ ಹಸಿದ ಹೊಟ್ಟೆಗೆ ಬರೆ

*Please cite this article as:* ಮಾರುತಿ, ಬಿ.ಕೆ. (2024). ಡಾ. ಮೊಗಳ್ಳಿ ಗಣೇಶ್ ಅವರ ಆಯ್ದ ಕಥೆಗಳಲ್ಲಿ ಕೌಟುಂಬಿಕ ನೆಲೆಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(2). ಪು.ಸಂ.* 57–63

ಹಾಕಿದಂತಾಗುತ್ತದೆ. ಅದಕ್ಕೂ ಮುಂಚೆ ಇವರು ಬತ್ತವನ್ನು ಕದ್ದು ಮನೆಗೆ ಸಾಗಿಸುವುದು ಹಸಿವನ್ನು ನೀಗಿಸಿಕೊಳ್ಳಲು ಮಾಡಿದ ಕೃತ್ಯವಾಗಿರುತ್ತದೆಯೇ ಹೊರತು. ಕಳ್ಳತನವಾಗಿರುವುದಿಲ್ಲ. ಹಸಿವನ್ನು ದೂರ ಮಾಡುವ ಬಗೆಯದ್ದು, ಇಂತಹ ಸ್ಥಿತಿ ಇವರಿಗೆ ಬಂದದ್ದು ದಾರಿದ್ರೆಯ ಸ್ಥಿತಿಯಲ್ಲ, ಇಲ್ಲದೆಯೇ ಬಂದಂತಹ ಸ್ಥಿತಿಯಾಗಿದೆ. ತಮ್ಮ ದುಡಿತಕ್ಕೆ ಸರಿಯಾದ ಪ್ರತಿಫಲವನ್ನು ಕೊಡದೆ, ಮಾನವೀಯ ಅಂತಃಕರಣವಿಲ್ಲದೆ, ಶ್ರಮದ ಫಲಾಪೇಕ್ಷೆಯನ್ನು ನೀಡದ ಅಂಶ ದಲಿತ ಕೇಂದ್ರ ಪಂಥಿಯನ್ನು ಮೀರಿ, ಒಟ್ಟು ದಮನಕ್ಕೊಳಪಟ್ಟ ಜನಸಮುದಾಯದ ದನಿಗಳಾಗಿ ವಿಸ್ತಾರವನ್ನು ಪಡೆದುಕೊಳ್ಳುತ್ತದೆ. ಇಲ್ಲಿ ಕಥೆಗಾರರು ಹಸಿವನ್ನು ನೀಗಿಸಿಕೊಳ್ಳಲು ಮಾಡಿದ ಹೋರಾಟವನ್ನು ಸಮರ್ಥವಾಗಿ ಅಭಿವ್ಯಕ್ತಪಡಿಸಿದ್ದಾರೆ. ಭೂಮಾಲೀಕತ್ವ ಮೇಲ್ವರ್ಗದವರ ಹಿಡಿತದಲ್ಲಿರುವುದರಿಂದ ಹಸಿವನ್ನು ನೀಗಿಸಿಕೊಳ್ಳಲು ದಲಿತರು ಅನುಸರಿಸಿದ ತಂತ್ರ ಅವರ ಜೀವನೋತ್ಸಾಹವನ್ನು ಕಥೆ ಸ್ಪಷ್ಟಪಡಿಸುತ್ತದೆ.

'ಬಾಳು' ಕಥೆಯಲ್ಲಿ ಗ್ರಾಮೀಣ ಜನರ ಜೀವನದ ಸ್ಥಿತಿ ಚಿತ್ರಣಗೊಂಡಿದೆ. ಕಥೆಯಲ್ಲಿ ಬರುವ 'ಮಾರೆ' ಮದುವೆಯಾಗಿದ್ದರೂ, ತನ್ನ ಗಂಡನನ್ನು ಬಿಟ್ಟು ತವರು ಮನೆಯಲ್ಲಿ ಜೀವನ ನಡೆಸುತ್ತಾಳೆ. ತನ್ನ ತಮ್ಮ ಮತ್ತು ತಂಗಿಯರನ್ನು ಸಾಕಲು ಹಲವಾರು ಸವಾಲುಗಳಿಗೆ ಮುಖಾಮುಖಿಯಾಗುವುದು ಅನಿವಾರ್ಯವಾಗುತ್ತದೆ. ಬದುಕಿನ ಬಡತನದ ಬವಣೆಯನ್ನು ನೀಗಿಸಿಕೊಳ್ಳಲು ಮೈಮಾರಿಕೊಳ್ಳುವ ಸ್ಥಿತಿ ಅವಳಿಗೆ ಬಂದೊದುಗುವುದು ಸಾಮಾಜಿಕ ದುರಂತದ ಸ್ಥಿತಿಗೆ ಕನ್ನಡಿ ಹಿಡಿದಂತಿದೆ. ಧಣಿಗಳ ಹೊಲದಲ್ಲಿ ತನ್ನ ತಮ್ಮನೊಡನೆ ಕಡಲೆಕಾಯಿ ಬಿಡಿಸಲು ಕೆಲಸಕ್ಕೆ ಹೋದಾಗ ಕಡಲೆಕಾಯಿಯನ್ನು ಬಿಡಿಸುತ್ತಲೆ, ಕದ್ದು ತಿನ್ನುವ ಪ್ರಕ್ರಿಯೆ ನಡೆಯುತ್ತದೆ. ಅಕ್ಕ ಮತ್ತು ತಮ್ಮ ಮಾತ್ರವಲ್ಲದೆ ಇತರೆ ಕೂಲಿ ಹುಡುಗರು ಕಡಲೆಕಾಯಿಯನ್ನು ಕದ್ದು ತಿನ್ನುವುದು ಮತ್ತು ಸಾಗಿಸುವುದು ಶತಶತಮಾನಗಳಿಂದ ದಲಿತರನ್ನು ಮುತ್ತಿಕೊಂಡು ಬಂದಿರುವ ಹಸಿವು ಮತ್ತು ಬಡತನವನ್ನು ಸೂಚಿಸುತ್ತದೆ. ಕೆಲಸ ಮುಗಿದ ಮೇಲೆ ದೊಡ್ಡವರು ಆಳುಗಳನ್ನು ಪರಿಶೀಲಿಸುವ ಘಟನೆ ಹೃದಯವಿದ್ರಾವಕವಾಗಿದೆ. ಕೆಲವು ಹುಡುಗರು ಒಂದಿಷ್ಟು ಕಡಲೆಕಾಯಿಯನ್ನು ಹಳೆಯ ಟವಲ್‌ಗಳಿಗೆ ಸೇರಿಸಿ ಅದನ್ನು ತಲೆ ಪೇಟಾವಾಗಿ ಸುತ್ತಿಕೊಂಡು 'ನೋಡ್ಕಳ್ರಪ್ಪೋ ಎಲ್ಲವುಸ್ಕಂದಿದ್ದೆವು ಅನ್ನುದಾ... ನಾವಂತ ಕಳ್ರಲ್ಲ ಕನ್‌ಬಿಡ್ರಪ್ಪಾ"[1] ಎಂದು ಎದ್ದು ನಿಲ್ಲುವುದು ತಳಸಮುದಾಯದವರ ಚಾಣಾಕ್ಷತನಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ. 'ಮಾರೆ'ಯ ರವಿಕೆಯ ತುದಿಯಲ್ಲಿ ಇರುವ ಒಂದು ಕಡಲೆಕಾಯಿ ಬೀಜವನ್ನು ಗಮನಿಸಿದ ಧಣಿಯ ಕಡೆಯವರು, ಅವಳ ಕಡೆ ಗಹನವಾಗಿ ದಿಟ್ಟಿಸಿನೋಡಿ ಅವಳ ರವಿಕೆಯನ್ನು ಪಟಾರ್ ಎಂದು ಕೀಳುವುದು ಅಮಾನವೀಯ ಘಟನೆಯಾಗುತ್ತದೆ. ಎಳೆದ ರಭಸಕ್ಕೆ ಭೂಮಿಯ ಮೇಲೆಲ್ಲಾ ಕಡಲೆಕಾಯಿಯ ಬೀಜಗಳು ಚೆಲ್ಲಾಡುತ್ತವೆ, ಹೊಲದ ಮಾಲೀಕ ಅವಳನ್ನು ಜರಿದು ಅವಮಾನಿಸುವ ಕೃತ್ಯ ನಡೆಯುತ್ತದೆ. ಹಸಿವನ್ನು ನೀಗಿಸಿಕೊಳ್ಳಲು ಇವಳು ಕಡಲೆಕಾಯಿ ಕದಿಯುವ ಅನಿವಾರ್ಯತೆಗೆ ಒಳಗಾಗಿ ಸಾಮಾಜಿಕವಾಗಿ ಅಪಮಾನಕ್ಕೆ ಗುರಿಯಾಗುತ್ತಾಳೆ. ಕತೆಯ ಕೊನೆಯಲ್ಲಿ 'ಮಾರೆ'ಯ ಅಕ್ರಮ ಸಂಬಂಧಗಳನ್ನು ತಿಳಿದ ಆಕೆಯ ತಮ್ಮ ಅದನ್ನು ಪ್ರತಿಭಟಿಸುವುದು ಸಹಜವಾದುದಾಗಿದೆ. ಇದರಿಂದ ನೊಂದ ಅವಳ ನಿಗೂಢವೆಂಬಂತೆ ಕಣ್ಮರೆಯಾಗುವ ವಿಶಿಷ್ಟತಂತ್ರದೊಡನೆ

ಕತೆ ಮುಕ್ತಾಯವಾಗುತ್ತದೆ. ಈ ಘಟನೆ ಬದುಕನ್ನು ಹರಸಿ ಹೊರಟು ಕಣ್ಮರೆಯಾಗಿ ಕನವರಿಸಿದ ಎಷ್ಟೋ ದಲಿತ ಜೀವಗಳ ಧಾರುಣತೆಗೆ ಸಾಕ್ಷಿಭೂತವಾಗಿ ನಿಲ್ಲುತ್ತದೆ.

'ಬಾಡೂಟ' ಕಥೆಯಲ್ಲಿ 'ರಾಜ'ನ ತಾತಾನು ಪೇಟೆಗೆ ಹೋಗಿ 'ಎಳನೀರು ಮತ್ತು ತೆಂಗಿನಕಾಯಿಗಳನ್ನು ಸಾಬರ ಬಳಿ ಮಾರಾಟ ಮಾಡಿ ಇಡಿ ಮನೆಮಂದಿಗೆಲ್ಲ ಗಂಜಿಯನ್ನು ಕಾಣಿಸಿ ಬದುಕುವುದರಲ್ಲಿ ಸ್ವರ್ಗವನ್ನು ಕಾಣುತ್ತಿರುತ್ತಾನೆ. ನಲವತ್ತು ವರ್ಷಗಳ ಕಾಲ ನಿರಂತರವಾಗಿ, ತನ್ನೆಲ್ಲ ಶಕ್ತಿ ಮೀರಿ ಬಡತನವನ್ನು ಸುಧಾರಿಸಲು ಹರಸಾಹಸಪಡುತ್ತಾ, ಹಸಿವಿನೊಂದಿಗೆ ಗುದ್ದಾಡುತ್ತಾ, ಜೀವನ ಚಕ್ರವನ್ನು ಸವೆಸುತ್ತಿರುತ್ತಾನೆ. ಈತನ ಮಗನಾದ ರುದ್ರನಿಗೆ ಇಬ್ಬರು ಹೆಂಡತಿಯರು ಮೊದಲ ಹೆಂಡತಿ ಸಾವಿಗೀಡಾದ ಮೇಲೆ, ಎರಡನೇ ಹೆಂಡತಿಯಾದ ಮಾದೇವಿಯು ಈತನ ಕುಟುಂಬದ ಹೆಗಲನ್ನು ಹೊರುತ್ತಾಳೆ. ಹಿರಿಹೆಂಡತಿ ಮಗಳಾದ 'ಸಾಕಿ'ಯು ಎಲ್ಲ ಕಷ್ಟದ ನಡುವೆಯು ತವರು ಮನೆಗೆ ಬಂದಿದ್ದಳು. ತನ್ನ ತಾಯಿ ಇದ್ದಿದರೆ ಏನೆಲ್ಲ ಸೌಕರ್ಯಗಳನ್ನು ಮಾಡುತ್ತಿದಳೋ ಎಂದು ಕಲ್ಪಿಸಿ ವೇದನೆಯಿಂದ ಹಳೆಯ ಘಟನೆಗಳನ್ನು ಮೆಲುಕುತ್ತಾ ಮಲತಾಯಿಯ ಮೇಲೆ ರೇಗಾಡುತ್ತಿದ್ದಳು. ಇವರಿಬ್ಬರು ಒಂದಿಲ್ಲೊಂದು ಕಾರಣಕ್ಕಾಗಿ ಬಿಗುಮಾನದಿಂದ ದಿನವಿಡಿ ಕಲಹವಾಗುವುದನ್ನು ಕತೆ ವಿಶಿಷ್ಟವಾಗಿ ಅಭಿವ್ಯಕ್ತಿಸುತ್ತದೆ. ಪೇಟೆಗೆ ಹೋಗಿದ್ದ ರಾಜನು ತನಗಾಗಿ ಚಿಕ್ಕವ್ವ ಬಾಡಿನ ಸಾರನ್ನು ಎತ್ತಿಡುತ್ತಾಳೆಂದು, ಅವಳ ಬಗ್ಗೆ ಪ್ರೀತಿಯಿಂದ ನೆನೆದುಕೊಳ್ಳುವುದು ಸಹಜವಾದುದು. ಮನೆಯಲ್ಲಿ ವಾರಗಿತ್ತಿಯರು, ಮಾದೇವಿಯ ಪರವಾಗಿ ಮಾತನಾಡಲು ಅಳುಕುತ್ತಾ. ಸಾಕಿಯ ಪರವಾಗಿಯು ಏನನ್ನು ಹೇಳಲಾರದೆ ಹಸಿಯುವ ಹೊಟ್ಟೆ ಕಡೆಗೆ ಗಮನಹರಿಸುತ್ತಾರೆ. ಬಾಡಿನ ತುಂಡಿನ ಜೊತೆಗೆ ರೊಟ್ಟಿಯ ಚೂರುಗಳು ಬಂದು ನಮ್ಮನ್ನು ಸ್ವರ್ಗಕ್ಕೆ ಕರೆದೊಯ್ಯುತ್ತವೆ ಎಂದು ಸಣ್ಣ ಮಕ್ಕಳೆಲ್ಲ ಮಾದೇವಿಯ ಸುತ್ತ ಕೋಳಿ ಮರಿಗಳಂತೆ ಸುತ್ತಿಕೊಳ್ಳುವ ಹಸಿವಿನ ದೃಶ್ಯ ಕರುಣಜನಕವಾಗಿದೆ. ಅವರೆಲ್ಲರ ನೀರಾಡುವ ಬಾಯಿಗಳಿಗೆ ಸಮವಾಗಿ ರೊಟ್ಟಿ ಬಾಡು ಹಂಚಿ ಸರಿದೂಗಿಸಲು ಅವಳಿಗೆ ದಿನವಿಡಿ ಸಾಕಾಗಿ ಹೋಗುತ್ತಿತ್ತು. ಇದು ಹಸಿವಿನ ಕಬಂಧ ಬಾಹುಗಳು ದಲಿತ ಕುಟುಂಬವನ್ನು ಆವರಿಸಿರುವುದನ್ನು ಸೂಚಿಸುತ್ತದೆ. ಮಾಂಸದ ತುಂಡುಗಳು ಇಡೀ ಘಟನೆಯಲ್ಲಿ ಅವಿತುಕೊಂಡಿದ್ದು, ಅವರವರು ಹೊಟ್ಟೆಕಿಚ್ಚಿನ ಹಸಿವಿನಲ್ಲಿ ಕರಗುತ್ತಾ ಜೀವನದ ಕಹಿಯಂತೆ ವಿಷವಾಗುತ್ತಿರುವಂತಿತ್ತು. ಸಾಕಿ ಮತ್ತು ಮಾದೇವಿಯ ಕಲಹದಲ್ಲಿ ಇವರಿಬ್ಬರ ಕಾದಾಟವನ್ನು ನೋಡಿ ರುದ್ರನು ಗಮನಿಸಿ, ಮಾದೇವಿಯ ಮೇಲೆ ರೋಷಭರಿತನಾಗಿ ಇಡೀ ಕೇರಿಗೆ ಧ್ವನಿಸುವಂತೆ ಅಬ್ಬರಿಸುವುದು ಕಥೆಯ ತಂತ್ರಗಾರಿಕೆ ದೃಷ್ಟಿಯಿಂದ ಮುಖ್ಯವಾಗುತ್ತದೆ. "ಯಾವ ಹೆಣ್ಣು, ಯಾವ ಗಂಡಿನ ಸಿರಿ ಮಂಚಕ್ಕೂ ಬರಬಾರದೆಂಬ ವ್ಯಾಕುಲದಲ್ಲಿ ಮಾದೇವಿ ತನ್ನ ವೇದನೆಯನ್ನು ಬಿಚ್ಚಿಡುತ್ತಾಳೆ."[2] ಕಥೆಯು ಅಂತಿಮದಲ್ಲಿ ಸಂಸಾರದುದ್ದಕ್ಕೂ ನೋವುಂಡು, ನಿಭಾಹಿಸಲಾರದೆ ಸಾವಿಗೆ ಶರಣಾಗುವುದರ ಮೂಲಕ ಘಟನೆ ಅಂತ್ಯಗೊಳ್ಳುತ್ತದೆ.

'ಕಾಳಿ' ಕಥೆಯ ಕಾಳಿ ಪಾತ್ರವು ದಲಿತ ಕುಟುಂಬದಲ್ಲಿ ಬದುಕಿನ ಜವಾಬ್ದಾರಿತನವನ್ನು, ಗಟ್ಟಿತನದಿಂದ ನಿರ್ವಹಿಸುವ ಔದಾರ್ಯ ಗುಣವನ್ನು ಪ್ರಕಟಪಡಿಸುತ್ತದೆ. ಗೌಡರ ಪಟ್ಟಿಯಲ್ಲಿ ಕಸ ಸುರಿಯುವ ಕಾಯಕದಲ್ಲಿ ಕಾಳಿ ನಿರತಳಾಗಿರುತ್ತಾಳೆ. ಎಷ್ಟೋ ಜನ ದುಡಿಮೆಯನ್ನು ಮಾಡಿಸಿಕೊಂಡು

ಅನ್ನವನ್ನು ನೀಡುತ್ತಿರಲಿಲ್ಲ. ಕೆಲವರು ಕಾಳಿಯ ಕೆಲಸದ ಏಕಾಗ್ರತೆಯನ್ನು ನೋಡಿ ತಂಗಳು ಕೊಡುತ್ತಿದ್ದರು. ಮಾರ್ಲಾಮಿಯ ಹಬ್ಬದಂದು ಅಳಿದುಳಿದ ಗೊಜ್ಜು, ಪಲ್ಯ, ತಾಳ್ದಾ, ಪಾಯಸ, ಅನ್ನ, ಹಿಟ್ಟು ಇವುಗಳನ್ನು ಹಿಂದೆ ಯಾವಾಗಲೋ ಕೊಟ್ಟಿದಕ್ಕೆ ಲೆಕ್ಕಹಾಕಿಸಿಕೊಂಡು ಕೆಲಸವನ್ನು ಮಾಡಿಸಿಕೊಳ್ಳುವುದು ಅಮಾನವೀಯವಾಗಿದೆ.

"ಮೇಕೆ ಮಾಂಸದ ಸಾರೇನಾದ್ರು ಆದೃಷ್ಟವಶಾತ್ ಒಂದು ಅರ್ಧ ಸೌಟಿನಷ್ಟು ಸಿಕ್ಕಿತೆಂದರೆ, ಅದೆ ಅವರಿಗೆ ಹಬ್ಬದ ಭೋಜನವನ್ನಿಸುತ್ತಿತ್ತು"[3] ಎಂಬುದು ಹಸಿವಿನ ಭೀಕರತೆಯನ್ನು ಸ್ಪಷ್ಟಪಡಿಸುತ್ತದೆ. ಕಥೆಗೆ ಪೂರಕವಾಗಿ ಇವರದೆ ಕಥೆಯಾದ "ಬಾಡೂಟ"ದಲ್ಲಿ ಮಾದೇವಿಯ ಕುಟುಂಬ ಮಾಂಸಕ್ಕಾಗಿ ಹಪಹಪಿಸುವ ಸಂದರ್ಭವನ್ನು ಕಾಣುತ್ತೇವೆ. ಇಲ್ಲೆಲ್ಲಾ ಹಸಿವಿನ ನಾನಾ ನೆಲೆಗಳು ಶಕ್ತಿಯುತವಾಗಿ ಪ್ರಕಟಗೊಂಡಿವೆ. ಕಾಳಿಯ ಸಂಸಾರಕ್ಕೆ ಮಾಂಸದ ರುಚಿ ಸಿಗುವಂತಿದ್ದರೆ ಸಾಯುವ ತನಕ ನಿಯತ್ತಿನಿಂದ ದೊಡ್ಡವರ ಮನೆಗಳಲ್ಲಿ ಜೀತ ಮಾಡಲು ನಾನು ಸಿದ್ಧ ಎಂದು ಈಕೆಯ ಮಗ ಮನಸ್ಸಿನಲ್ಲಿ ತೀರ್ಮಾನಿಸುವುದು, ಹಸಿವು ಮನುಷ್ಯನನ್ನು ಎಂತಹ ಹೀನಾಯ ಸ್ಥಿತಿಗೆ ಕೊಂಡೊಯ್ಯುತ್ತದೆ ಎಂಬುವುದನ್ನು ಸ್ಪಷ್ಟಪಡಿಸುತ್ತದೆ. ಒಂದು ಮೂಳೆಯ ಚೂರಿಗಾಗಿ, ಒಂದು ತುತ್ತಿನ ಕೃಪೆಗಾಗಿ, ಕನಿಕರದ ನೋಟಕ್ಕಾಗಿ ಅವರು ಮುಂದೆ ಎಷ್ಟೆಲ್ಲ ವಿನಿತವಾಗಿ ತಲೆಬಾಗಲು ಅಣಿಯಾಗುವೆ ಎಂದು ಕಾಳಪ್ಪ ತನ್ನ ಹಸಿವಿನ ನೋವನ್ನು ತೋಡಿಕೊಳ್ಳುತ್ತಾನೆ.

ಕಥೆಯ ಅಂತ್ಯದಲ್ಲಿ ಆತ್ಮಸ್ಥೈರ್ಯ ತನ್ನ ಕುಟುಂಬದನ್ನು ಕಟ್ಟಿಕೊಳ್ಳುವುದಕ್ಕಾಗಿ ಸ್ವಾಭಿಮಾನದ ಸುಳಿಯಲ್ಲಿ ದಾರಿದ್ರ್ಯತನವನ್ನು ಹೋಗಲಾಡಿಸಬೇಕೆಂಬ ಹಠಮಾರಿತನ, ಜೀವನ ಪ್ರೀತಿಯನ್ನು ಸೂಚಿಸುತ್ತದೆ. ಜೀವನದ ಆರಂಭದಿಂದ ಮುಕ್ತಾಯದವರಿಗೂ ಆಕೆ, ಕುಟುಂಬ ತೀವ್ರವಾದ ಬಡತನವನ್ನು ಹೋಗಲಾಡಿಸಲು, ಧಣಿಗಳ ಪ್ರಮಾಣಬದ್ಧವಾಗಿ ಕಾಯಕಕ್ಕೆ ಹೊಂದಿಕೊಂಡು ಸ್ವಾಭಿಮಾನದ ಅಡಿಯಲ್ಲಿ ಜೀವಿಸುತ್ತಾ ಕಣ್ಮರೆಯಾಗುತ್ತಾಳೆ.

'ಕಿಚ್ಚು' ಕಥೆಯ ಸಾಕಕ್ಕ ದೊಡ್ಡವರ ಹೊಲದಲ್ಲಿ ಕಡಲೆಕಾಯಿ ಬಿಡಿಸುವ ಕಾಯಕಕ್ಕೆ ಹೋಗುವ ಸ್ಥಿತಿಯನ್ನು ನೋಡಿದರೆ, ಇವಳ ಕುಟುಂಬದಲ್ಲಿ ಬಡತನದ ತೀವ್ರತೆ ಎದ್ದು ಕಾಣುತ್ತದೆ. ಈಕೆಯ ಮಗಳಾದ ಪುಟ್ಟಿಯು ರೊಟ್ಟಿ ಸಿಗಬಹುದೆಂಬ ಹಂಬಲದಿಂದ ತಾಯಿ ಬರುವುದನ್ನು ಕಾಯುತ್ತಿರುತ್ತಾಳೆ, ಚೂರು ರೊಟ್ಟಿಗಾಗಿ ಪುಟ್ಟಿಯ ಜೊತೆಯಲ್ಲಿದ್ದ "ನಾಯಿ"ಯು ಅವಳನ್ನೇ ಅನುಕಂಪದಿಂದ ನೋಡುತ್ತಿರುತ್ತದೆ. ಈ ಸಂದರ್ಭಗಳನ್ನು ಗಮನಿಸಿದರೆ, ದಲಿತರು ಹಸಿವನ್ನು ನೀಗಿಸಿಕೊಳ್ಳುವುದು ಸವಾಲಾಗಿ, ಅದಕ್ಕಾಗಿ ಪಡುವ ಬವಣೆಗಳು ಮುಖ್ಯವಾಗುತ್ತವೆ. ಶೋಷಿತ ವರ್ಗದ ಮಹಿಳೆಯರಲ್ಲಿ ಹಸಿವು ರೋಷಭರಿತವಾಗಿಯೂ ಸಾವಧಾನವಾಗಿಯೂ ಕಂಡುಬಂದಿದ್ದು, ಕುಟುಂಬದ ನಿರ್ವಹಣೆಯನ್ನು ಮಾಡಿಕೊಂಡು ಬದುಕುವಂತಹ ವಿವಿಧ ಮುಖಗಳನ್ನು ಕಾಣುವುದರಲ್ಲಿ ಕ್ರಿಯಾಶೀಲತೆ ಎದ್ದು ತೋರುತ್ತದೆ. ಸಾಕಕ್ಕನು ತನ್ನ ಬದುಕನ್ನು ಕಟ್ಟಿಕೊಳ್ಳುವ ರೀತಿಯನ್ನು ನೋಡಿದರೆ 'ಈಸಬೇಕು ಇದ್ದು ಜಯಿಸಬೇಕು' ಎಂಬ ಮಾತಿಗೆ ಪೂರಕವಾಗಿ, ತನ್ನ ಸಂಸಾರದ ಉಳಿವಿಗಾಗಿ ಹೋರಾಡುವುದು ಗಮನಾರ್ಹವಾದುದು. ಈಕೆಯ ಅಸಾಧಾರಣ ಸ್ತ್ರೀಯಾಗಿ ಗೋಚರಿಸುವುದನ್ನು ಕಥೆಗಾರರು ವಿಶೇಷವಾಗಿ ಚಿತ್ರಿಸಿದ್ದಾರೆ. "ಮಲಕ್ಕ ಮಗ, ವತಾರಕೆ ಐಯ್ನೋರ್‌ವಲ್ಕೆ ಕಡ್ಲೆಕಾಯಿ ಬಿಡ್ಸುಕೋಗ್ಬೇಕು, ಬ್ಯಾಗ್ನೆಯೇ ಏಳಬೇಕು ಮಲ್ಕ"[4] ಕೋಗೋಕು, ಎಂದಾಗ ಊಂ ಊಂ

ಎನ್ನುತ್ತಾ ಹಳೆ ಸೀರೆಗಳನ್ನು ಹೊಲೆದು ಮಾಡಿದ್ದ ಹಾಸಿಗೆಯ ಮೇಲೆ ಮುದುರಿಕೊಂಡು ಎಣ್ಣೆಯಾಗಿ ಜಿಡುಗಟ್ಟಿದ ಬಟ್ಟೆಗಂಟಿನ ತಲೆದಿಂಬಿಗೆ ಮುಖ ಹಾಕಿ ಮಲಗಿಬಿಟ್ಟಳು ಪುಟ್ಟಿ" ಎಂಬ ಮಾತುಗಳು, ಸಾಕಕ್ಕ ತನ್ನ ನೆರೆಹೊರೆ ಜನರ ಎದುರು ಸರಿ ಸಮಾನವಾದ ಬಾಳನ್ನು ಕಟ್ಟಿಕೊಳ್ಳಲು ಹೆಣಗಾಡುವುದನ್ನು ಕಥೆಯ ಉದ್ದಕ್ಕೂ ಕಾಣಬಹುದು.

'ಬೇಟೆ' ಕಥೆಯ ಕರಿಯಣ್ಣನ ಜೀತಾಗಾರಿಕೆಯನ್ನು ಬಿಟ್ಟು ಮೀನು ಹಿಡಿಯುವ ಕಸುಬಿನಲ್ಲಿ ತೊಡಗಿರುತ್ತಾನೆ. ಈತನು ಹಾಕಿದ ಕೊಳೆಯಿಂದ ಬಂದ ಮೀನನ್ನು ಗೌಡರ ಕಡೆಯವರು ಕದ್ದೊಯ್ಯುತ್ತಾರೆ. ಇಂತಹ ಸ್ಥಿತಿಯಲ್ಲಿ ಕರಿಯಣ್ಣನು ತುಂಬಾ ಚಿಂತೆಗೆ ಒಳಗಾಗುವುದು ಗಮನಾರ್ಹವಾದದ್ದು. ಹಸಿವನ್ನು ನೀಗಿಸಿಕೊಳ್ಳಲು ಮಾಡುವ ಪರ್ಯಾಯ ವೃತ್ತಿಯನ್ನು ತಡೆಯುವ ಪ್ರಕ್ರಿಯೆಯನ್ನು ಕರಿಯಣ್ಣ ಸಮರ್ಥವಾಗಿ ನಿಭಾಯಿಸುತ್ತಾನೆ. ಹೆಂಡತಿಯಾದ 'ಹನುಮಿ'ಯು ತನ್ನ ಗಂಡನಿಗಾದ ದುಸ್ಥಿತಿ ಕಂಡು ಮರುಗುವ "ಅಲಾ ಅದ್ಯಾವ್ ಸಾಮ್ರಾಜ್ಯ ವಂಟೋಯ್ತು ಅಂತ ಗೊಣಗಾಡಿಯೆ? ಕದ್ದಿ ತಿಂದೋರ್ ಮನೆ ಗುಡ್ಸಿ ಗುಂಡಾಂತ್ರ ಆಗಿ ಯಕ್ಕುಟ್ಟೋಯ್ತದೆ ಖನ ಮಲಕೊ ಇಪಟು, ಈ ಊರಿಲ್ಲ ಅಂದ್ರೆ ಇನ್ನೊಂದುರು ಇನ್ನೊಂದೇಸ, ಕೊಕ್ರೆಗೆ ಒಂದೂರೋ ಒಂದ್ ಕೆರೆಯೋ"[5] ಎಂದು ಹನುಮಿ ಯಾವತ್ತೂ ಇಲ್ಲದ ಧೈರ್ಯದಲ್ಲಿ ಗಂಡನಿಗೆ ಸಮಾಧಾನ ಹೇಳಲು ತೊಡಗಿ ಉಬ್ಬಸದ ಉಸಿರಾಟದಲ್ಲಿ ಕೆಮ್ಮ ತೊಡಗುವುದು ಆಕೆಯ ಎದೆಗಾರಿಕೆಯನ್ನು ಸೂಚಿಸುತ್ತದೆ. ದಲಿತರು ಹಿಡಿದ ಮೀನು ಮಾತ್ರ ಗೌಡರಿಗೆ ಬೇಕು, ಆದರೆ ಶೋಷಿತರನ್ನು ಗೌರವಿಸುವ ಮನೋಭಾವ ಎಂದು ಮೂಡುತ್ತದೆ ಎಂಬ ಗಂಭೀರ ಪ್ರಶ್ನೆಯನ್ನು ಈ ಕಥೆ ಮುಂದಿಡುತ್ತದೆ. ದೊಡ್ಡವರು ಕರಿಯಣ್ಣನ ಬದುಕನ್ನು ನಿಯಂತ್ರಿಸುವ ಮತ್ತು ವೃತ್ತಿಗೆ ಅಡ್ಡಿಯನ್ನು ಮಾಡುವುದು ಶತಶತಮಾನದಿಂದಲೇ ಕಂಡುಬರುತ್ತದೆ. ದಾರುಣವಾದಂತಹ ಹಸಿವಿನ ಸಂಕೋಲೆಯನ್ನು ಕರಿಯಣ್ಣನು ಮುಖಾಮುಖಿಯಾಗಿ ನಿಭಾಯಿಸುವಂತ ಘಟನೆಗಳನ್ನು ಗಮನಿಸಿದರೆ ನೂರಾರು ನೋವುಗಳ ನಡುವೆ, ದಲಿತರ ಜೀವ ಚೈತನ್ಯ ಸಂಕಷ್ಟಗಳ ಹಿಂದೆ ಮರೆಯಾಗಿಲ್ಲ ಎಂಬ ಅಂಶ ಸ್ಪಷ್ಟವಾಗುತ್ತದೆ.

'ವ್ಯೂಹ' ಕಥೆಯ 'ದಾಸ'ನು ಸ್ವಾಮಿನಿಷ್ಠೆಯನ್ನು ತೋರಿಸುವುದರ ಮೂಲಕ ಕಥೆ ತೆರೆದುಕೊಳ್ಳುತ್ತದೆ. ಈತ ಸುಬ್ಬೇಗೌಡನ ಮನೆಯಲ್ಲಿ ಕೂಲಿ ಕೆಲಸಕ್ಕಾಗಿ ಸೇರಿಕೊಂಡಿರುತ್ತಾರೆ. ಕಾರಣ ದಾಸನು ಕುಟುಂಬದ ನಿರ್ವಹಣೆಗಾಗಿ ಯಜಮಾನರು ನೀಡುವ ಕೂಲಿಯನ್ನೆ ನಂಬಿಕೊಂಡು ಬದುಕಬೇಕಾಗಿತ್ತು. ಧಣಿಗಳಿಗೆ ಸರ್ಕಾರದಿಂದ ಸಾಲ ಸೌಲಭ್ಯ ಸಿಗುತ್ತಿರಲಿಲ್ಲ. ಇದನ್ನೆ ನಂಬಿಕೊಂಡು ಕಾಯಕ ಮಾಡುತ್ತಿದ್ದ ದಾಸ ಬದುಕನ್ನು ಕಟ್ಟಿಕೊಳ್ಳಲು ಹೆಣಗಾಡುತ್ತಿದ್ದನು. ದಲಿತರಿಗೆ ಕೂಲಿ ಇದ್ದರೆ ಮಾತ್ರ ಜೀವನದನ್ನು ಸರಾಗವಾಗಿ ನಡೆಸಬಹುದಿತ್ತು. ಮುಖ್ಯವಾಗಿ ಇವನನ್ನೇ ನಂಬಿಕೊಂಡು ಮನೆಯಲ್ಲಿದ್ದ ನಾಯಿಯು ಹಸಿವಿನ ಒಡೆತಕ್ಕೆ ಸಿಲುಕಿ ನರಳಾಡುತ್ತಿತ್ತು. ಈತನ ಮನೆಯನ್ನು ಕಾಯುತ್ತಿದ್ದ 'ನಾಯಿ'ಯು ತನ್ನ ಮರಿಗಳಿಗೆ ಹಾಲುಣಿಸಲು ತ್ರಾಣವಿಲ್ಲದ ಪರಿಸ್ಥಿತಿಯನ್ನು ನೋಡಿದರೆ ಹಸಿವು ದಲಿತರನ್ನಷ್ಟೇ ಕಾಡದೆ, ಅವರು ಸಾಕುತ್ತಿದ್ದ ಪ್ರಾಣಿಗಳಿಗೂ ಆವರಿಸಿಕೊಂಡಿತ್ತು ಎಂಬ ಅಂಶ ಸ್ಪಷ್ಟವಾಗುತ್ತದೆ. ಧಣಿಯ ದರ್ಪಕ್ಕೆ ಸಿಲುಕಿಕೊಂಡ 'ದಾಸ'ನ ಬದುಕು ಅತಂತ್ರ ಸ್ಥಿತಿಗೆ ತಲುಪುತ್ತದೆ. ಸುಬ್ಬೇಗೌಡನ ಹೆಂಡತಿಯಾದ ಲಕ್ಷ್ಮಮ್ಮಳು ಮನೆಗೆ ದಾಸನು ಬಂದಿದ್ದ ವಿಚಾರವನ್ನು ತಿಳಿಸುತ್ತಾಳೆ. ಇದಕ್ಕೆ ಕೋಪಗೊಂಡ ಗೌಡರು "ಬೆಳಬೆಳಿಗ್ಗೆಯೇ ಆ ದರಿದ್ರ ಸೂಳೇಮಗ ನನ್

ಮನೆ ಕೊಟ್ಗೇಲಿ ಬಂದ್ ಕೂತ್ಕಂಡ್ ದುಡ್ಡು ಕೇಳುವಂಗಾದ್ನೆ"[6] ಎಂದು ದರ್ಪದಿಂದ ಅವನನ್ನು ಹೀಯಾಳಿಸುತ್ತಾನೆ.

ಕೂಲಿಕಾರನಾದ ದಾಸನಿಗೆ ಸರಿಯಾಗಿ ಹಣಪಾವತಿಸುವುದಿಲ್ಲ. ಇವರು ಶತಶತಮಾನಗಳಿಂದಲೂ, ದಲಿತರನ್ನು ನಡೆಸಿಕೊಂಡು ಬಂದ ರೀತಿಯನ್ನು ನೋಡಿದರೆ ಉಳ್ಳವರ ಒಡೆತಕ್ಕೆ ಸಿಕ್ಕಿ ಜರ್ಜರಿತವಾಗಿರುವುದು ಸ್ಪಷ್ಟವಾಗುತ್ತದೆ. ದುಡಿದ ಕೆಲಸಕ್ಕಾಗಿ ಹಣವನ್ನು ಕೇಳುವ ಧೈರ್ಯವು ಇವರಿಗಿರಲಿಲ್ಲ, ಇಂತಹ ಎಷ್ಟೋ ಘಟನೆಗಳು ಭೂತಕಾಲದಲ್ಲಿ ಗತಿಸಿ ಹೋಗಿದ್ದರೂ ಕೂಡ, ವರ್ತಮಾನಕಾಲದಲ್ಲಿಯೂ ಶೋಷಿತರು ಎದುರಿಸುತ್ತಿರುವ ಸಮಸ್ಯೆಗಳನ್ನು ಕಥೆಗಾರರು ತಮ್ಮ ಗ್ರಾಮೀಣ ಭಾಷೆಯ ಬನಿಯೊಡನೆ ಸಮರ್ಥವಾಗಿ ಕಟ್ಟಿಕೊಡುತ್ತಾರೆ. ಪ್ರಧಾನವಾಗಿ ಇವರಿಗೆ ರಾಜಕೀಯ ಬೆಂಬಲ ಇಲ್ಲದಿರುವುದು ಇಂದಿಗೂ ವಾಸ್ತವ ಸತ್ಯ ಎಂಬುದನ್ನು ಲೇಖಕರು 'ದಾಸ'ನ ಪಾತ್ರದ ಮೂಲಕ ಸಮಾಜದ ವ್ಯವಸ್ಥೆಯಲ್ಲಿರುವ ಕಾರಣೀಭೂತವಾದ ವಿಚಾರಗಳನ್ನು ಚಿತ್ರಿಸಿದ್ದಾರೆ.

'ತಣಿಗೆ' ಕಥೆಯಲ್ಲಿ ಪರಂಪರೆಯಿಂದ ಬಂದ ತಣಿಗೆ 'ತಾತಾ'ನ ಕುಟುಂಬದ ಜೀವಾಳವಾಗಿತ್ತು. ಬದುಕಿನ ಆಧಾರಸ್ಥಂಭವಾಗಿ ಮೌಲ್ಯದ ಪ್ರತಿಬಿಂಬವಾಗಿತ್ತು. ಗೌಡರ ಮನೆಯಲ್ಲಿ ಸಾಲಕ್ಕಾಗಿ ಅಡವಿಡುವ ಮೂಲಕ ದಲಿತರ ದಾರಿದ್ರ್ಯಕ್ಕೆ ಸಹಾಯಕವಾಯಿತು. ದುಸ್ಥಿತಿಯನ್ನು ಕಂಡು ಅಜ್ಜ ತೊಳಲಾಡುವ ಸಂದರ್ಭ ಗಂಭೀರವಾದುದಾಗಿದೆ. ತಮ್ಮ ಹಿರಿಯ ತಲೆಮಾರಿನಿಂದ ಬಂದ ಗೌರವದ ಸಂಕೇತವಾದ ತಣಿಗೆಯನ್ನು ಉಳಿಸಿಕೊಳ್ಳಲಾಗಲಿಲ್ಲವಲ್ಲ ಎಂದು ತಾತ ಮರುಗುತ್ತಾನೆ. ಏಕೆಂದರೆ ತಾತ ಮೊಮ್ಮಕ್ಕಳ ದುಡಿಮೆಯನ್ನು ಎಂದು ನಂಬಿದವನಲ್ಲ. ತಾನು ಸಾಯುವತನಕ ಎಲ್ಲರ ಹೊಟ್ಟೆಗೂ ಊಟ ಹಾಕಬೇಕೆಂಬ ಹಠ ಅವನಲ್ಲಿತ್ತು. ಹಾಗಾಗಿ ದುಡಿಮೆಯ ಹಣ ಅವರ ಹಸಿವನ್ನು ಪೂರೈಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ನಮ್ಮ ಸುಖಸಂತೋಷ, ಸಂಪತ್ತು ಮನೆಯಿಂದ ಹೊರಗೆ ಹೋಗಬಾರದೆಂದು ಅಜ್ಜ ಮನದಾಸೆ ಇಟ್ಟುಕೊಂಡಿದ್ದನು.

ಒಮ್ಮೆ 'ತಾತಾ'ನು ತನ್ನ ಮೊಮ್ಮಗನನ್ನು ಕರೆದು ನನ್ನ ಕೊನೆ ಆಸೆಯನ್ನು ಈಡೇರಿಸುವೆಯಾ...? ಎಂದು ಬೇಡಿಕೊಳ್ಳುತ್ತಾನೆ. "ಅದೇನೆಂದರೆ ನೀನು ಚಿಕ್ಕೋನು ಇದ್ದಾಗ ನಮ್ಮನೆ ಭೂಮ್ತಾಯಿ ತರವಾಗಿ ಇತ್ತಲ್ಲಾ ಆ ದೊಡ್ ತಣಿಗೆ ಆದಾ ಬಿಡಿಸ್ಕಬಂದು ನನ್ಗೋನ್‌ಸಲ ಕೊಟ್ಟಿಯೇನಪ್ಪಾ ಎಂದು ದೀನನಾಗಿ ಬೇಡಿದ"[7] ಅವನ ಕೊನೆ ಆಸೆಯನ್ನು ಕೇಳಿಸಿಕೊಂಡು ಎಲ್ಲರೂ ನಕ್ಕುಬಿಟ್ಟರು. ತಾತಾ ಯಾವುದೋ ತಪ್ಪುಮಾಡಿದೆ ಎಂಬಂತೆ ಮೌನವಾದ.

ಅಜ್ಜನ ತಣಿಗೆಯನ್ನು ನೋಡಿ ಮೊಮ್ಮಗನಿಗೆ ಅಳು ತಡೆಯಲು ಆಗಲಿಲ್ಲ. ಕಾರಣ ದೊಡ್ಡ ಸ್ಥಾನದಲ್ಲಿದ್ದ ತಣಿಗೆಯನ್ನು ತಾತಾ ಕೊನೆಯಲ್ಲಿ ಕೋರಿಕೊಂಡಿದ್ದರಿಂದ ನನಗೆ ದುಃಖ ಇಮ್ಮಡಿಯಾಯಿತು. ಸಾಂಸ್ಕೃತಿಕವಾಗಿ ದೈವಿಕ ಎಂದು ಕರೆಯುತ್ತಿದ್ದ ಕಂಚಿನ ತಣಿಗೆಯನ್ನು ಹರಾಜು ಹಾಕುವ ಹೀನಾಯ ಸ್ಥಿತಿಯನ್ನು ನೋಡಿದರೆ ಕೆಳಜಾತಿಯ ಜನರ ಹಸಿವಿನ ಪರಿಯನ್ನು ಕಥೆ ಸಮರ್ಥವಾಗಿ ಕಟ್ಟಿಕೊಡುತ್ತದೆ. ಅಜ್ಜನು ಸಾಯುವ ಅಂತ್ಯಸ್ಥಿತಿಯನ್ನು ನೋಡಿದರೆ, ಆ ತಟ್ಟೆಯು ಅವನ ಹೃದಯ ಭಾಗವಾಗಿದೆ. ತಣಿಗೆಯ

ಮೂಲಕ 'ತಾತಾ'ನ ದೈವಿಭಕ್ತಿಯನ್ನು ಹಾಗೂ ಜೀವನದ ಒಡಲನ್ನು ತುಂಬಿಸುವ ಹಣತೆ, ತಣಿಗೆ ಗಮನಸೆಳೆಯುತ್ತದೆ.

ಕಥೆಯ ಅಂತಿಮದಲ್ಲಿ 'ತಾತಾ'ನಿಗೆ ತಣಿಗೆ ಬಗ್ಗೆ ಇರುವ ಔದಾರ್ಯ ದೈವತ್ವದ ಭಕ್ತಿ ಹಾಗೂ ಬಡತನವನ್ನು ನಿರ್ಮೂಲನೆ ಮಾಡುವ ಮೂಲಕ ಕಥೆಗಾರರು ದಲಿತ ಸಂಸ್ಕೃತಿಯ ಆಚರಣೆಯ ಬಗ್ಗೆ ತಮ್ಮ ಅನುಭವದ ವಿಚಾರಗಳನ್ನು ಅಭಿವ್ಯಕ್ತಗೊಳಿಸಿದ್ದಾರೆ.

ಮೊಗಳ್ಳಿ ಅವರ ಕಥೆಗಳಲ್ಲಿ ಹಸಿವು ಮತ್ತು ಬಡತನ ಒಂದು ನಾಣ್ಯದ ಎರಡು ಮುಖಗಳಂತೆ ಗೋಚರವಾಗುತ್ತದೆ. ಆದರೆ ಇಲ್ಲಿಯ ಪಾತ್ರಗಳು ಹಸಿವು ಮತ್ತು ಬಡತನದ ಬೇಗುದಿಯಲ್ಲಿ ಬೆಂದು ಹೋಗದೆ ಅದನ್ನು ಸಮರ್ಥವಾಗಿ ಎದುರಿಸಿ ನಿಲ್ಲುವ ಪ್ರಕ್ರಿಯೆಯಲ್ಲಿ ಕಥೆಗಳಿಗೆ ಅನನ್ಯತೆ ಪ್ರಾಪ್ತವಾಗಿದೆ.

**ಕೊನೆ ಟಿಪ್ಪಣಿಗಳು**

1. ಮೊಗಳ್ಳಿ ಗಣೇಶ್. (2008). *ಮೊಗಳ್ಳಿ ಕಥೆಗಳು.* ಸಪ್ನ ಬುಕ್‌ಹೌಸ್. ಪುಟ. 49
2. ಅದೇ. ಪುಟ. 64
3. ಅದೇ. ಪುಟ. 53
4. ಅದೇ. ಪುಟ. 25
5. ಅದೇ. ಪುಟ. 203
6. ಅದೇ. ಪುಟ. 13
7. ಅದೇ. ಪುಟ. 108

**ಪರಾಮರ್ಶನ ಗ್ರಂಥಗಳು**


- ಮೊಗಳ್ಳಿ ಗಣೇಶ್. (2008). *ಮೊಗಳ್ಳಿ ಕಥೆಗಳು.* ಸಪ್ನ ಬುಕ್‌ಹೌಸ್, ಬೆಂಗಳೂರು.
- ಮೊಗಳ್ಳಿ ಗಣೇಶ್. (2010). *ಕನ್ನೆಮಳೆ ಕಥೆಗಳು.* ಅಂಕಿತ ಪುಸ್ತಕ, ಬೆಂಗಳೂರು.